ರುಚಿಕರವಾದ ಉಪಹಾರ
ಸಿಹಿ–ಖಾರ ತಿಂಡಿಗಳು
**ನ್ಯೂ ಕೋರ್ಟ್ ರೆಸ್ಟೋರೆಂಟ್**
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ

ವಾರಪತ್ರಿಕೆ

ಸ್ಥಾಪನೆ : 1948
7 ದಶಕಗಳ ವಿಶ್ವಾಸನೀಯ ಸೇವೆಯಲ್ಲಿ
**ಶೇಟ್ ಜ್ಯುವೆಲ್ಲರ್ಸ್**
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 31 ॥ ಸಂಚಿಕೆ : 31। UDP/1263/2021-23 || RNI.NO.50495/91 ॥ ತಾರೀಖು: 07–09–2021 ॥ ರೂ 5/– ॥ ವಾರ್ಷಿಕ ಚಂದಾ : 350/– ಅಂಚೆಯಲ್ಲಿ : 500/

# ಬೆನಕ–ನೀಡಯ್ಯ ಬಾಳೆಲ್ಲ ಬೆಳಗುವ ಬೆಳಕ

ಭಾರತದಲ್ಲಿ ಅತ್ಯಂತ ಶ್ರದ್ಧಾ ಭಕ್ತಿಗಳಿಂದ ಆಚರಿಸಲ್ಪಡುವ ಹಬ್ಬಗಳಲ್ಲಿ ಒಂದಾದ ಗಣೇಶ ಚತುರ್ಥಿ ಹಬ್ಬ ಈ ವರ್ಷ ಅದ್ದೂರಿ, ಸಂಭ್ರಮದಲ್ಲಿರದಿದ್ದರೂ ಧಾರ್ಮಿಕ ಆಚರಣೆ ಹಿನ್ನೆಲೆಯಲ್ಲಿ ಅರ್ಥಪೂರ್ಣವಾಗಿ ನಡೆಯಲಿದೆ.

ವಿದ್ಯೆ, ಜ್ಞಾನದ ಅಧಿಪತಿ ಎಂದೇ ಕರೆಸಿಕೊಳ್ಳುವ ವಿಘ್ನೇಶ್ವರನನ್ನು ಸದಾ ಪೂಜಿಸಲಾಗುತ್ತಿದ್ದರೂ ವರ್ಷಕ್ಕೊಮ್ಮೆ ಆಚರಿಸಲ್ಪಡುವ "ಚೌತಿ"ಗೆ ಅದರದ್ದೇ ಆದ ವಿಶೇಷ ಮಹತ್ವವಿದೆ. ಭಾದ್ರಪದ ಮಾಸದ ಶುಕ್ಲ ಪಕ್ಷದ ಚತುರ್ಥಿಯ ಶುಭಾವಸರದಲ್ಲಿ ಗಣೇಶ ವಿಗ್ರಹ ಸ್ಥಾಪಿಸಿ ಪೂಜಿಸುವ ಧಾರ್ಮಿಕ ಆಚರಣೆ ಶ್ರೇಷ್ಠವಾಗಿದೆ.

ಮೊದಲು ಗೌರಿ ಪೂಜೆ ನಡೆಸಿ ನಂತರ ಗಣೇಶ ಪೂಜೆ ನಡೆಸಲಾಗುತ್ತದೆ. ಹೆಚ್ಚಿನ ಸಂದರ್ಭಗಳಲ್ಲಿ ಗಣೇಶ ಚತುರ್ಥಿಯ ಮುನ್ನಾದಿನ ಮುತ್ತೈದೆಯರು ಗೌರಿ ಪೂಜೆಯನ್ನು ಬಹಳ ಶ್ರದ್ಧೆಯಿಂದ ಆಚರಿಸುತ್ತಾರೆ. ಶ್ರಾವಣ ಮಾಸದಲ್ಲಿ ಒಂದು ತಿಂಗಳು ಶುಕ್ರವಾರ, ರವಿವಾರ 'ದಂದು ಮನೆಗಳಲ್ಲಿ ಚೂಡಿಪೂಜೆ ಸಹಿತ ದೇವಾಲಯಗಳಲ್ಲಿ ವಿಶೇಷ ಪೂಜೆ ನಡೆಯುತ್ತವೆ.

ಈ ಬಾರಿ ಚೌತಿ ಸಾರ್ವಜನಿಕವಾಗಿ ನಡೆಸಲು ಅನುಮತಿ ಸಿಗುವ ಬಗ್ಗೆ ಇದ್ದ ಗೊಂದಲ ನಿವಾರಣೆಯಾಗಿದೆ. ಸದ್ದು, ಗದ್ದಲವಿಲ್ಲದೇ ಶ್ರದ್ಧೆಯಿಂದ ಸರಳವಾಗಿ ಗಣೇಶ ಚತುರ್ಥಿ ಆಚರಿಸಿ ಎಂದು ಕರ್ನಾಟಕ ರಾಜ್ಯ ಸರಕಾರ ಸೂಚನೆ ನೀಡಿದೆ. ಕೋವಿಡ್ ನಿಯಮಗಳನ್ನು ಪಾಲಿಸಿ ಮಿತ ಸಂಖ್ಯೆಯ ಜನರ ಸೇರ್ಪಡೆಯೊಂದಿಗೆ ವಿಘ್ನೇಶ್ವರನ ಹಬ್ಬ ಆಚರಣೆ ಸೆಪ್ಟೆಂಬರ್ 10 ರಿಂದ ನಡೆಯಲಿದೆ.





### ಆನೆಗುಡ್ಡೆ ಶ್ರೀ ವಿನಾಯಕ ದೇವಸ್ಥಾನ

ಆನೆಗುಡ್ಡೆ ಶ್ರೀ ವಿನಾಯಕ ದೇವಸ್ಥಾನದಲ್ಲಿ ದಿನಾಂಕ 10–09–2021ರಂದು ಶುಕ್ರವಾರ ಶ್ರೀ ವಿನಾಯಕ ಚತುರ್ಥಿ ಪ್ರಯುಕ್ತ **ಅಷ್ಟೋತ್ತರ ಸಹಸ್ರ ನಾಲಿಕೇರ ಗಣಯಾಗ** ವರ್ಷಂಪ್ರತಿಯಂತೆ ಸಾಂಪ್ರದಾಯಿಕ ರೀತಿಯಲ್ಲಿ ಜರುಗಲಿದೆ ಎಂದು ದೇವಸ್ಥಾನದ ಪ್ರಕಟಣೆ ತಿಳಿಸಿದೆ. ಭಕ್ತಾದಿಗಳು ಕೋವಿಡ್ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ದೇವರ ದರ್ಶನಕ್ಕೆ ಆಗಮಿಸಬೇಕೆಂದು ತಿಳಿಸಲಾಗಿದೆ.

### ಹಟ್ಟಿಅಂಗಡಿ ಶ್ರೀ ಸಿದ್ಧಿವಿನಾಯಕ ದೇವಸ್ಥಾನ

ಶ್ರೀ ಗಣೇಶ ಚತುರ್ಥಿ ಮಹೋತ್ಸವದ ಅಂಗವಾಗಿ ದಿನಾಂಕ 10 ರಿಂದ 12ರ ತನಕ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ. ಅಷ್ಟೋತ್ತರ ಸಹಸ್ರ ನಾಳಿಕೇರ ಮಹಾಗಣಯಾಗ , ಶ್ರೀಸತ್ಯಗಣಪತಿ ವ್ರತ, ಲಕ್ಷದೂರ್ವಾರ್ಚನೆ ಮತ್ತು ಸಿಂದೂರಾರ್ಚನೆ ನಡೆಯಲಿದೆ . ದಿನಾಂಕ 12 ರಂದು ದಿವಂಗತ ಹಟ್ಟಿಯಂಗಡಿ ರಾಮಚಂದ್ರ ಭಟ್ಟರ ಸ್ಮಾರಕ ಉದ್ಘಾಟನೆ ನಡೆಯಲಿದೆ ಎಂದು ದೇವಸ್ಥಾನದ ಧರ್ಮದರ್ಶಿ ಮತ್ತು ಶ್ರೀ ಗಣೇಶ ಚತುರ್ಥಿ ಮಹೋತ್ಸವ ಸಮಿತಿಯವರು ತಿಳಿಸಿದ್ದಾರೆ.

ನಮ್ಮೆಲ್ಲ ಹಿತೈಷಿಗಳು ಹಾಗೂ ಆತ್ಮೀಯ ಗ್ರಾಹಕರಿಗೆ

**ಶ್ರೀ ಗಣೇಶ ಚತುರ್ಥಿ ಶುಭಾಶಯಗಳು**



cakewala
Memorable moments. Forgettable prices.

Eshanya
Street food cafe

**ಗೋಪಾಡಿ ಶ್ರೀನಿವಾಸ್ ರಾವ್**
ಚೇರ್‌ಮೆನ್
ಮಯೂರ ಗ್ರೂಪ್
ಬೆಂಗಳೂರು / ಕುಂದಾಪುರ / ಕಡಪ